ಊ) ಅನ್ವಯಿಸುವುದಿಲ್ಲ

ಋ)

ವರ್ಷಗಳು	ಲಾಭ	ನಷ್ಟ (ರೂ. ಲಕ್ಷಗಳಲ್ಲಿ)
2001–02	–	638.92
2002–03	–	736.63
2003–04	–	1870.20

ಋೂ) ನಿಜವಾಗಿರುತ್ತದೆ

ಎ) ಕಂಪನಿಯ ನಿಯಮಗಳ ಪ್ರಕಾರ ಮಹಾಲೇಖಪಾಲರು ಅನುಮೋದಿಸಿರುವ ಸಂಸ್ಥೆಯವರಿಂದ ಲೆಕ್ಕ ಪರಿಶೋಧನೆ ನಡೆಸಬೇಕಾಗುತ್ತದೆ.

492(719) : ಶ್ರೀ ಸುನೀಲ್ ಕುಮಾರ್.ವಿ (ಕಾರ್ಕಳ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಸ್ಥಾಪಿಸುವ ಮೊದಲು ಇದ್ದಂತಹ ಮೀಸಲಾತಿ ನೀತಗಳಾವುವು?

ಆ) ಯಾವ ಆಧಾರದ ಮೇಲೆ ಈ ಸೌಲಭ್ಯ ನೀಡಲಾಗುತ್ತಿತ್ತು (ವಿವರ ನೀಡುವುದು)

ಇ) ಈಗಿನ ಮೀಸಲಾತಿ ಅನುಸಾರ ಉದ್ಯೋಗಕ್ಕೆ ಹಾಗೂ ವ್ಯಾಸಂಗಕ್ಕೆ ಅನುಸರಿಸುವ ಮಾನದಂಡಗಳಾವುವು;

ಈ) ಆದಾಯ ಮಿತಿಯನ್ನು ನಿಗದಿಪಡಿಸಲಾದ ಮೊತ್ತ ಎಷ್ಟು: (ಪ್ರವರ್ಗವಾರು ವಿವರ ನೀಡುವುದು)

ಡಾ॥ ವೈ.ನಾಗಪ್ಪ(ಸಮಾಜ ಕಲ್ಯಾಣಸಚಿವರು) :

ಅ) ಶಾಶ್ವತ ಹಿಂದುಳಿದ ವರ್ಗಗಳ ಆಯೋಗವು ರಚನೆಯಾಗುವ ಮುನ್ನ ರಾಜ್ಯದಲ್ಲಿನ ಮೀಸಲಾತಿ ನೀತಿಯನ್ನು ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲೂಡಿ 150 ಬಸಿಎ 94 ದಿ: 17.9.94 ರಲ್ಲಿ ಸ್ಪಷ್ಟಪಡಿಸಲಾಗಿದೆ.

1) ಹಿಂದುಳಿದ ಜಾತಿಗಳ ವರ್ಗೀಕರಣ:

ಹಿಂದುಳಿದ ಜಾತಿಗಳನ್ನು ಒಟ್ಟು 4 ಪ್ರವರ್ಗಗಳಾಗಿ ವಿಂಗಡಿಸಿದ್ದು, 791 ಜಾತಿ, ಉಪಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಲಾಗಿತ್ತು.

	ವರ್ಗೀಕರಣ	ಜಾತಿಗಳ ಸಂಖ್ಯೆ	ಉಪಜಾತಿಗಳು	ಒಟ್ಟು
1.	ವರ್ಗ–1	895	266	355
2.	ವರ್ಗ–2 (ಎ)	104	257	358
3.	ವರ್ಗ–2 (ಬಿ)	01	–	01
4.	ವರ್ಗ–3 (ಎ)	03	31	32
5.	ವರ್ಗ–3 (ಬಿ)	06	13	49
	ಒಟ್ಟು	**200**	**591**	**791**

2) ಮೀಸಲಾತಿ:

ವಿವಿಧ ಪ್ರವರ್ಗಗಳ ಹಿಂದುಳಿದ ಜಾತಿಗಳಿಗೆ ಒಟ್ಟಾರೆ ಶೇ. 32 ಮೀಸಲಾತಿಯನ್ನು ನೀಡಿದ್ದು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಮೊಸಲಾತಿಯು ಸೇರಿ ಶೇ. 50ರಷ್ಟು ಮೊಸಲಾತಿ ಒದಗಿಸಲಾಗಿತ್ತು. ವಿವಿಧ ಪ್ರವರ್ಗಗಳಿಗೂ ನೀಡಲಾದ ಮೊಸಲಾತಿಯ ಪ್ರಮಾಣ ಕೆಳಕಂಡದಂತಿದೆ.

1.	ಪ್ರವರ್ಗ	ಶೇ. 4
2.	ಪ್ರವರ್ಗ–2 (ಎ)	ಶೇ. 15
3.	ಪ್ರವರ್ಗ–2 (ಬಿ)	ಶೇ. 4
4.	ಪ್ರವರ್ಗ–3 (ಎ)	ಶೇ. 4
5.	ಪ್ರವರ್ಗ–3 (ಬಿ)	ಶೇ. 5
6.	ಪರಿಶಿಷ್ಟ ಜಾತಿ	ಶೇ. 15
7.	ಪರಿಸಿಷ್ಟ ವರ್ಗ	ಶೇ. 3
	ಒಟ್ಟು	ಶೇ. **50**

3. ಕೆನೆ ಪದರ ನೀತಿ

ಸರ್ಕಾರದ ಆದೇಶ ಸಂಖ್ಯೆ ಎಸ್ ಡಬ್ಲ್ಯೂ ಡಿ 150 ಬಿಸಿಎ 94 ದಿ. 17.8.94 ಆದೇಶದಂತೆ ಪ್ರವರ್ಗ–1ರ ಹೊರತು ಇತರ ಹಿಂದುಳಿದ ವರ್ಗಗಳು ಮೊಸಲಾತಿ ಪಡೆಯಲು ಕೆನೆ ಪದರ ವ್ಯಾಪ್ತಿಯಿಂದ ಹೊರಗಿರಬೇಕೆಂದು ತೀರ್ಮಾನಿಸಲಾಗಿದೆ.

ಆ) ಸಾಮಾಜಿಕ, ಶೈಕ್ಷಣಿಕ, ಅರ್ಥಿಕ ಹಿಂದುಳಿದಿರುವಿಕೆಯ ಆಧಾರದ ಮೇಲೆಗೇ ಈ ಸೌಲಭ್ಯ ನೀಡಲಾಗುತ್ತಿತ್ತು.

ಇ) ಈಗಿನ ಮೊಸಲಾತಿ ನೀತಿಗೂ ಸಾಮಾಜಿಕ, ಶೈಕ್ಷಣಿಕ ಹಾಗೂ ಅರ್ಥಿಕ ಹಿಂದುಳಿದಿರುವಿಕೆಯೇ ಮಾನದಂಡವಾಗಿದ್ದು ಸರ್ಕಾರದ ಆದೇಶ ಸಂಖ್ಯೆ ಎಸ್ ಡಬ್ಲ್ಯೂ ಡಿ 225 ಬಿಸಿಎ 2000 ದಿ: 30–3–2000 ರಲ್ಲಿ ಸ್ಪಷ್ಟಪಡಿಸಿದ ಕ್ರಿಮಿ ಲೇಯರ್ ವ್ಯಾಪ್ತಿಯಿಂದ ಹೊರಗಿರುವವರು ಮೊಸಲಾತಿ ಪಡೆಯಲು ಅರ್ಹರಾಗಿರುತ್ತಾರೆ.

ಈ) ಹಿಂದುಳಿದ ವರ್ಗದ ಪ್ರವರ್ಗ–1ಕ್ಕೆ ಆದಾಯ ಮಿತಿ ಇಲ್ಲ ಹೊರತು, ಇತರೆ ಹಿಂದುಳಿದ ವರ್ಗಗಳಿಗೆ ಉದ್ಯೋಗಕ್ಕಾಗಿ ಮತ್ತು ಶಿಕ್ಷಣಕ್ಕೆ ಕ್ರಿಮಿ ಲೇಯರ್ ನಿಗದಿಪಡಿಸಿದೆ. ಇತರ ಸೌಲಭ್ಯಗಳಿಗೆ ರೂ. 15,000.00 ವಾರ್ಷಿಕ ಅದಾಯದ ಮಿತಿ ವಿದಿಸಲಾಗಿದೆ. ಶುಲ್ಕ ವಿನಾಯಿತಿಗೆ ವಾರ್ಷಿಕ ಆದಾಯದ ಮಿತಿ ರೂ. 11,000.00 ನಿಗದಿಪಡಿಸಲಾಗಿದೆ.

493(1139) : ಶ್ರೀ ಪಾಟಾಳ್ ನಾಗರಾಜ್ ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

1. ಬೆಂಗಳೂರು ನಗರ ಯಾವುದಾದರೊಂದು ಸ್ಥಳದಲ್ಲಿ ದಿವಂಗತ ಬಾಬು ಜಗಜೀವನರಾಂ ರವರ ಪ್ರತಿಮೆಯನ್ನು ನಿರ್ಮಿಸಲು ಸರ್ಕಾರ ನಿರ್ಧರಿಸಿದೆಯೇ?

2. ಹಾಗಿದ್ದಲ್ಲಿ, ಸದರಿ ಪ್ರತಿಮೆಯನ್ನು ಯಾವ ಸ್ಥಳದಲ್ಲಿ ನಿರ್ಮಿಸಲು ನಿರ್ಧರಿಸಿದೆ?